OS 20/2022

PW-1

ದಿನಾಂಕಃ **18.12.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಎಸ್ ಆರ್ ವಿ ವಕೀಲರಿಂದಃ**

ನಿಪಿ.17 ನ್ನು ಯಾರು ಯಾರು ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆಯ 3 ಜನ ಸಹೋದರರು ಮತ್ತು ಅವರ ಮಕ್ಕಳೆಲ್ಲರೂ ಸೇರಿ ಬರೆದುಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಯ ಅಣ್ಣ ತಮ್ಮಂದಿರು ವೆಂಕಟೇಶಪ್ಪ ಮತ್ತು ಪಾಪಣ್ಣ. ಇವರಿಬ್ಬರು ತೀರಿಕೊಂಡಿದ್ದಾರೆ. ನಮ್ಮ ತಂದೆಯ ಹೆಸರು ಚಂದ್ರಪ್ಪ. ನಮ್ಮ ತಂದೆಗೆ ನಾವು 3 ಜನ ಮಕ್ಕಳು, ನಮ್ಮ ತಾಯಿ ನಾಗರತ್ನಮ್ಮ ಬದುಕಿದ್ದಾರೆ. ಸಂಸಾರದ ಯಜಮಾನಿಕೆಯನ್ನು ನನ್ನ ತಂದೆ ಚಂದ್ರಪ್ಪ ಮಾಡುತ್ತಿದ್ದಾರೆ. ನನ್ನ ತಂದೆಯನ್ನು ಜಿ ಚಂದ್ರಶೇಖರ ಎಂದೂ ಸಹ ಕರೆಯುತ್ತಾರೆ. ನಮ್ಮ ತಂದೆಯ ಅಣ್ಣ ತಮ್ಮಂದಿರು ವಿಭಾಗ ಆಗಿದ್ದಾರೆ. ಏಪ್ರಿಲ್ 2021 ರಲ್ಲಿ ವಿಭಾಗ ಆಗಿದ್ದಾರೆ. ವಿಭಾಗ ಆದ ದಾಖಲಾತಿಯನ್ನು ಬರೆಯಲಾಗಿರುತ್ತದೆ. ನಿಪಿ.17 ಕ್ರಯಪತ್ರ ಆದ ನಂತರ ವಿಭಾಗ ಮಾಡಿಕೊಂಡು ಅವರವರ ಭಾಗವನ್ನು ಬರೆದುಕೊಟ್ಟು ಸಹಿ ಮಾಡಿದ್ದೇವೆ. ಆ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಏನು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.